ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**

**ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ**

ಸಂಖ್ಯೆ : ಗ್ರಾಅಪ/ರಾನೀನೈಮಿ/ಎಸ್‌ಬಿಎ/ Rch- 24/2012-13/1582 ದಿನಾಂಕ :19.02.2014

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಧಿಕಾರಿಗಳು
ಜಿಲ್ಲಾ ಪಂಚಾಯತ್ ರಾಯಚೂರು.

**ಮಾನ್ಯರೆ,**

**ವಿಷಯ:** ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಿಕೊಂಡಿರುವ ಫಲಾನೂಭವಿಗಳಿಗೆ ಪ್ರೋತ್ಸಾಹ ಧನ ಪಾವತಿಸಿಲ್ಲದಿರುವ ಬಗ್ಗೆ.

**ಉಲ್ಲೇಖ :** 1) ಸ್ಪ್ರೇಡ್, ಸಹಭಾಗಿತ್ವದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪರಿಸರ ಸಂಸ್ಥೆ ಇವರ ಪತ್ರ ದಿನಾಂಕ: 07.02.2014
2) ಸರ್ಕಾರದ ಅಪರ ಮುಖ್ಯ ಕಾರ್ಯದಶಿಗಳು ಇವರ ಸೂಚನೆ, ದಿನಾಂಕ10.2.2014

-----

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ರಾಯಚೂರು ಮತ್ತು ಮಾನ್ವಿ ತಾಲೂಕುಗಳಲ್ಲಿನ ಕೆಲವು ಗ್ರಾಮಗಳಲ್ಲಿ ಸ್ಪ್ರೇಡ್ ಸಂಸ್ಥೆ ಸಾರ್ವಜನಿಕರನ್ನು ಪ್ರೇರೇಪಣೆ ಮಾಡಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದು, ಈ ಸದರಿ ಫಲಾನುಭವಿಗಳಿಗೆ ಇದುವರೆವಿಗೂ ಪ್ರೋತ್ಸಾಹಧನ ನೀಡಿರುವುದಿಲ್ಲ ಎಂದು ಉಲ್ಲೇಖ (1)ರಂತೆ ಸ್ಪ್ರೇಡ್ ಸಂಸ್ಥೆಯವರು ಮನವಿ ಸಲ್ಲಿಸಿರುತ್ತಾರೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಶೌಚಾಲಯ ನಿರ್ಮಾಣ ಮಾಡಿಕೊಂಡಿರುವ ಫಲಾನುಭವಿಗಳಿಗೆ ಪ್ರೋತ್ಸಾಹಧನ ನೀಡುವುದರಲ್ಲಿ ವಿಳಂಬವಾಗಿರುವ ಬಗ್ಗೆ ಸೂಕ್ತ ಮಾಹಿತಿಯನ್ನು ಪಡೆಯುವಂತೆ ಸೂಚಿರುತ್ತಾರೆ.ಆದ್ದರಿಂದ ಉಲ್ಲೇಖ (1)ರಲ್ಲಿನ ಪತ್ರದಲ್ಲಿ ತಿಳಿಸಿರುವಂತೆ ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ಸೇರುವ ಗ್ರಾಮಗಳಲ್ಲಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡಿರುವ ಪಲಾನುಭವಿಗಳಿಗೆ ಪ್ರೋತ್ಸಾಹಧನ ನೀಡದಿರುವ ಬಗ್ಗೆ ಇಂದು ಸಂಜೆಯೊಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ರಾಜ್ಯ ಕಚೇರಿಗೆ ಅಗತ್ಯ ಮಾಹಿತಿ ನೀಡಲು ಕ್ರಮವಹಿಸಬೇಕಾಗಿ ಸೂಚಿಸಲಾಗಿದೆ

ಅಡಕ : ಸ್ಪ್ರೇಡ್ ಸಂಸ್ಥೆಯವರು ನೀಡಿರುವ ದೂರಿನ ಪ್ರತಿ.

ತಮ್ಮ ವಿಶ್ವಾಸಿ

for

ಮಿಷನ್ ನಿರ್ದೇಶಕರು
ರಾಜ್ಯ ನೀರು & ನೈರ್ಮಲ್ಯ ಮಿಷನ್ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:-**

1. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತಕಾರ್ಯದರ್ಶಿಯವರ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.

ದೂರವಾಣಿ ಸಂ.22221861-62 : - ಫ್ಯಾಕ್ಸ್ :-22221862 E-mail : wsrdpr@gmail.com.

"ಸ್ಪ್ರೆಡ್" "SPRED"
ಸಹಭಾಗಿತ್ವದಲ್ಲಿ ಗ್ರಾಮೀಣ ಹಾಗೂ ಪರಿಸರ ಅಭಿವೃದ್ಧಿ ಸಂಸ್ಥೆ (ರಿ)
SOCIETY FOR PARTICIPATORY RURAL AND ENVIRONMENT DEVELOPMENT (REG.)
# 12-4-14, III floor,
Beside Sudeepaa Chits
Gunj Circle,Raichur-584102
Cell: 9448155147
e-mail: spred@rediffmail.com

ದಿನಾಂಕ: 07.02.2014

ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು,
ಜಿಲ್ಲಾ ಪಂಚಾಯತ್,
ರಾಯಚೂರು.

ಮಾನ್ಯರೇ,

ವಿಷಯ:- ಶೌಚಾಲಯಗಳ ಪ್ರೋತ್ಸಾಹಧನ ಬಿಡುಗಡೆ ವಿಳಂಬವಾಗುತ್ತಿರುವ ಕುರಿತು

ಉಲ್ಲೇಖ: 1) ತಮ್ಮ ಅವಗಾಹನೆಗೆ ನಮ್ಮ ಮನವಿ ಪತ್ರಗಳು ದಿನಾಂಕ:23.09.2013. 31.05.2013 ಮತ್ತು 15.10.2013

2)ನಮ್ಮ ಪತ್ರ ಇ. ಓ., ತಾಲ್ಲೂಕು ಪಂಚಾಯತಿ, ರಾಯಚೂರು ತಾಲ್ಲೂಕು, ರಾಯಚೂರು.

3)ನಮ್ಮ ಪತ್ರ ಪಿ.ಡಿ.ಓ ಬಿಜನಗೇರರವರಿಗೆ ದಿನಾಂಕ:13.01.2013.

4)ನಮ್ಮ ಪತ್ರ ಪಿ.ಡಿ.ಓ ಸಗಮಕುಂಟ ದಿನಾಂಕ:08.03.2013.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸ್ಪ್ರೆಡ್ ಸಂಸ್ಥೆಯು ರಾಯಚೂರು ಜಿಲ್ಲೆಯ ರಾಯಚೂರು ಮತ್ತು ಮಾನ್ವಿ ತಾಲ್ಲೂಕುಗಳ ಈ ಕೆಳಕಂಡ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗ್ರಾಮೀಣ ಮಹಿಳೆಯರನ್ನು ಒಗ್ಗೂಡಿಸಿ ತಿಳುವಳಿಕೆ ನೀಡಿ ಗ್ರಾಮಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿದ್ದು, ಈಗಾಗಲೇ ಗ್ರಾಮ ಪಂಚಾಯ್ತಿಗೆ ದಾಖಲಾತಿಗಳನ್ನು ಸಲ್ಲಿಸಿ 1 ವರ್ಷವಾದರೂ ಇಲ್ಲಿಯವರೆಗೆ ಫಲಾನುಭವಿಗಳಿಗೆ ಪ್ರೋತ್ಸಾಹಧನ ಬಿಡುಗಡೆಯಾಗಿರುವುದಿಲ್ಲ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಹಾಗೂ ತಮ್ಮ ಇಲಾಖೆಯಿಂದ ಸರಿಯಾದ ಸ್ಪಂದನೆ ಸಿಗುತ್ತಿಲ್ಲ. ಕೇವಲ ಮುದ್ದನಗುಡಿ ಮತ್ತು ಅಮರೇಶ್ವರ ಕ್ಯಾಂಪ್‌ನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಹಲವಾರು ಫಲಾನುಭವಿಗಳಿಗೆ ಭಾಗಶಃ ಪ್ರೋತ್ಸಾಹಧನ ಬಿಡುಗಡೆಮಾಡಿ ಪೂರಕವಾಗಿ ಸ್ಪಂದಿಸಿರುತ್ತಾರೆ. ನಮ್ಮ ಸಂಸ್ಥೆಯ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕಾಧಿಕಾರಿಗಳನ್ನು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಭೇಟಿ ಮಾಡಿದ್ದು ಹಾಗೂ ದೂರವಾಣಿ ಮುಖಾಂತರ ಸಂಪರ್ಕಿಸಿದ್ದರು, ಸರಿಯಾಗಿ ಸ್ಪಂದಿಸದೇ ಇಲ್ಲಿಯವರೆವಿಗೂ ಹಣ ಬಿಡುಗಡೆಯಾಗಿರುವುದಿಲ್ಲ. ಈ ಪ್ರಯತ್ನ ಕಳೆದ 1 ವರ್ಷದಿಂದ ಜಾರಿಯಲ್ಲಿದ್ದು, ಕೂಡಲೇ ಶೌಚಾಲಯಗಳ ಪ್ರೋತ್ಸಾಹಧನವನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

| ಕ್ರ. ಸಂ. | ತಾಲ್ಲೂಕು | ಗ್ರಾಮ ಪಂಚಾಯಿತಿ | ಗ್ರಾಮ | ನಿರ್ಮಿಸಿದ ಶೌಚಾಲಯಗಳು | ಗ್ರಾ.ಪಂ.ಗೆ ಸಲ್ಲಿಸಿದ ದಾಖಲಾತಿಗಳ ವಿವರ |
|---|---|---|---|---|---|
| 1 | ರಾಯಚೂರು | ಸಗಮಕುಂಟಾ | ಯರಗುಂಟಾ | 108 | 107 |
| 2 | | ಸಿಂಗನೋಡಿ | ಬಾಪೂರು | 105 | 100 |
| 3 | | ಬಿಜನಗೆರೆ | ಸಿದ್ರಾಂಪುರ | 26 | 20 |
| 4 | | ಬಾಯಿದೊಡ್ಡಿ | ಬಾಯಿದೊಡ್ಡಿ | 10 | 00 |
| 5 | ಮಾನ್ವಿ | ಕುರಡಿ | ಕುರಡಿ | 50 | 36 |
| 6 | | ಹಿರೇಕೊಟ್ನೇಕಲ್ | ಅಮರೇಶ್ವರಕ್ಯಾಂಪ್ | 50 | 48 |
| 7 | | ಪೋತ್ನಾಳ್ | ಮುದ್ದನಗುಡಿ | 111 | 111 |
| | | | ಒಟ್ಟು | 460 | 422 |

DIRECTOR KRIMS... BANGALORE
D: 13/02/14
No.........

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಆನಂದ ಪಾಟೀಲ)
"ಸ್ಪ್ರೆಡ್" ಸಂಸ್ಥೆ, ರಾಯಚೂರು.

ಪ್ರತಿಯನ್ನು,
ಟಿ.ಎಮ್. ವಿಜಯಭಾಸ್ಕರ್, ಅಪರ ಮುಖ್ಯ ಕಾರ್ಯದರ್ಶಿಗಳು, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
ಕಾರ್ಯನಿರ್ವಾಹಕಾಧಿಕಾರಿಗಳು, ತಾಲ್ಲೂಕು ಪಂಚಾಯತ್. ರಾಯಚೂರು ತಾಲ್ಲೂಕು, ರಾಯಚೂರು